



ಗಳಲ್ಲಿ ಟಗರುಗಳ ಬಲಿ ನೀಡುತ್ತಿದ್ದಾರೆ. ಅರಮನೆ ಮತ್ತು ಚಾಮುಂಡಾ ಮಂದಿರದ ಮುಂದಿನ ಜಾಗದಲ್ಲಿ 'ಗರ್ಬೋಲ್ ಮಾತಾ ಕಿ ಉತ್ಸವ್' ನಡೆಯುತ್ತಿತ್ತು.

**ಹವೇಲಿ:** ಶ್ರೀಮಂತ ವ್ಯಾಪಾರಿಗಳ ಅನೇಕ ಹವೇಲಿಗಳು ಈ ಕೋಟೆಯ ಒಳಗಿವೆ. ವ್ಯಾಸ ಹವೇಲಿಯನ್ನು 15 ಶತಮಾನದಲ್ಲಿ ಕಟ್ಟಿದ್ದರೂ ಈಗಲೂ ಅಂದಿನ ಕುಟುಂಬದ ವಂಶಜರೇ ವಾಸಿಸುತ್ತಿದ್ದಾರೆ ಎನ್ನುತ್ತಾರೆ. ಇಲ್ಲಿಯ ಅರಮನೆಯನ್ನು ಶ್ರೀನಾಥ್ ಪ್ಯಾಲೇಸ್ ಎಂದು ಕರೆಯುತ್ತಾರೆ. ರಾಜಸ್ಥಾನ ಮಾಹಿತಿಯ ಪ್ರಕಾರ, 'ಪಾಟವಾನ್ ಕಿ ಹವೇಲಿ' ಹೆಚ್ಚು ವಿಶಾಲವಾದ ಹವೇಲಿ. ಈ ಹವೇಲಿಯಲ್ಲಿ ಐದು ಅಂತಸ್ತುಗಳಿವೆ. ಇದು ಕೋಟೆಯ ಮಧ್ಯದಲ್ಲಿದ್ದು ಸುರಕ್ಷಿತವಾಗಿದೆ. ಹವಾಪೋಲ್, (ಗಾಳಿದ್ವಾರ) ಗಣೇಶ್ ಪೋಲ್, ಸೂರಜ್ ಪೋಲ್ ಇವೆಲ್ಲ ದ್ವಾರಗಳ ಹೆಸರು. ಸೂರಜ್ ಪೋಲ್ (ಪೂರ್ವ ದ್ವಾರ)ದ ಮೂಲಕ ಕೋಟೆಯ ಮಧ್ಯ ಭಾಗಕ್ಕೆ ಪ್ರವೇಶ ಕಲ್ಪಿಸಲಾಗಿದೆ. ಕೋಟೆಯ ನೆಲ ಅಂತಸ್ತಿನಲ್ಲಿ ಮಹಡಿಗಳುಳ್ಳ ಹವೇಲಿ ಇದೆ.

ಅರಮನೆ ಮಾತ್ರ ಅರಸು ಪರಿವಾರದವರ ಸುಪರ್ದಿಯಲ್ಲಿದೆ. ಉಳಿದ ಭಾಗದ ಕೋಟೆಯನ್ನು ಅರಮನೆಯ ಪರಿವಾರದವರಿಗೆ ದಾನ ನೀಡಿದ್ದಾರೆ ಅಂದಿನ ಅರಸರು. ಅಂದು ದಾನ ಪಡೆದವರ ಪೀಳಿಗೆಯವರು ತಲೆ ತಲಾಂತರದಿಂದ ಇಲ್ಲಿ ವ್ಯಾಪಾರ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಹೀಗಾಗಿ ಇಲ್ಲಿ ಜನಸಂಖ್ಯೆ ಹೆಚ್ಚಾಗಿ ಸ್ವಚ್ಛತೆಗೆ ಗಮನ ನೀಡಿಲ್ಲ. ಜನರಿಂದ ಕಿಕ್ಕಿರಿದ ಕೋಟೆ ಇದು. ಈ ಕೋಟೆಯೊಳಗೆ ಸುಮಾರು 4000 ಕುಟುಂಬಗಳಿವೆ ಎನ್ನಲಾಗುತ್ತಿದೆ.

ಜೈಸಲ್ಮೇರ್ ಒಂದೊಮ್ಮೆ ಪ್ರಸಿದ್ಧ ವ್ಯಾಪಾರಿ ಮಾರ್ಗವಾಗಿತ್ತು. ಮಧ್ಯೆಯುಗದಲ್ಲಿ ಪರ್ಷಿಯಾ, ಅರೇಬಿಯಾ, ಈಜಿಪ್ಟ್ ಮತ್ತು ಆಫ್ರಿಕಾ ದೇಶದೊಂದಿಗೆ ಇದ್ದ ಭಾರತದ ವ್ಯಾಪಾರ ವಹಿವಾಟಿನ ಮಾರ್ಗ ಜೈಸಲ್ಮೇರ್ ಆಗಿತ್ತು. ಹೀಗಾಗಿ ಇಲ್ಲಿ ವ್ಯಾಪಾರಿಗಳು ಭಾರಿ ಶ್ರೀಮಂತರೇ.

ನಮ್ಮ ಗೈಡ್ ನಮ್ಮನ್ನು ಬಜಾರಿಗೆ ಎಳೆದುಕೊಂಡು ಹೋದ. ಸ್ಯಾಂಡ್ ಸ್ಟೋನ್‌ನಿಂದ ತಯಾರಿಸಲಾದ ವಸ್ತುಗಳನ್ನು ಖರೀದಿಸಲು ಒತ್ತಡ ಹೇರಿದ. ಇದು ಹಳದಿ ಬಣ್ಣದ ಕಲ್ಲು. ರಾತ್ರಿ ಹಾಲಿನ ಒಳಗೆ ಈ ಕಲ್ಲು ಹಾಕಿದರೆ ಅದು ಬೆಳಗಾಗುವಾಗ ಮೊಸರಾಗುತ್ತದೆ. ಅಥವಾ ಅವರ ಬೋಗುಣಿಯಾಕಾರದ ಹಳದಿ ಕಲ್ಲಿನ ಪಾತ್ರೆ ಖರೀದಿಸಿ ಸ್ಯಾಂಡ್ ಸ್ಟೋನ್ ನಿಂದ ಆಗುವ ಆರೋಗ್ಯ ಲಾಭವನ್ನು ಪಡೆಯಿರಿ ಎಂಬುದು ವ್ಯಾಪಾರಿಗಳ ಒತ್ತಡ ತಂತ್ರ. ನಾನೂ ಒಂದು ಪಾತ್ರೆ ಮನೆಗೆ ತಂದೆ. ಅದರಲ್ಲೀಗ ನಾನು ಉಪ್ಪು ತುಂಬಿಸಿಟ್ಟಿದ್ದೇನೆ.



ಮರುದಿನ ನಮ್ಮ ಪ್ರಯಾಣ ಜೈಸಲ್ಮೇರ್ ಹೊರಗೆ ಇರುವ ವುಡ್ ಫಾಸಿಲ್ ಪಾರ್ಕ್ ಕಡೆಗೆ.

## ವುಡ್ ಫಾಸಿಲ್ ಪಾರ್ಕ್

ಮರಗಳ ಪಳೆಯುಳಿಕೆಯ ತೋಟವಿದು. ಪಳೆಯುಳಿಕೆಗಳು ಲಕ್ಷಾಂತರ ವರುಷಗಳ ಹಿಂದಿನ ಜನಜೀವನ ಮಾತ್ರವಲ್ಲ ಪ್ರಾಕೃತಿಕ ಸ್ವರೂಪಗಳ ಬಗ್ಗೆಯೂ ಮಾಹಿತಿ ನೀಡುತ್ತವೆ.

ಜೈಸಲ್ಮೇರ್ ನಗರದಿಂದ 17 ಕಿಲೋಮೀಟರ್ ಹೊರಗೆ ಈ 'ಫಾಸಿಲ್ ಪಾರ್ಕ್' ಇದೆ. ವಿಜ್ಞಾನಿಗಳ ಪ್ರಕಾರ ಇದು ಜುರಾಸಿಕ್ ಯುಗಕ್ಕೆ ಸೇರುತ್ತದೆ. ಹಿಂದೆ ಸರಿದ ಸಮುದ್ರದ ಭಾಗ ಈ ಭೂಮಿ ಎನ್ನುತ್ತಾರೆ. ವಿಜ್ಞಾನಿಗಳ ಪ್ರಕಾರ 180 ದಶಲಕ್ಷ ವರ್ಷಗಳ ಹಿಂದೆ ಇಲ್ಲಿ ಕಾಡು ಇತ್ತಂತೆ. 'ಮುಂದೆ ಇಲ್ಲಿಯ ಭೂಮಿ ಸಮುದ್ರದೊಳಗೆ ಸೇರಿತು. ಮತ್ತೆ ಸಮುದ್ರ ಭೂಮಿಯನ್ನು ಬಿಟ್ಟುಕೊಟ್ಟಾಗ ಕಾಡಿನ ಮರಗಳು ಫಾಸಿಲ್ ಆಗಿ ಮಾರ್ಪಟ್ಟಿವೆ. ವಿಶಾಲ ಪಾರ್ಕ್‌ನಲ್ಲೆಲ್ಲ ಫಾಸೆಲ್ಸ್ ಹರಡಿಕೊಂಡಿದೆ' ಎನ್ನುತ್ತಾರೆ ವಿಜ್ಞಾನಿಗಳು. ಮರದ ದಿಮ್ಮಿಗಳನ್ನು ಹೋಲುವ ಫಾಸಿಲ್‌ಗಳ ಉದ್ದ 1.5 ಮೀಟರ್ ನಿಂದ 13 ಮೀಟರ್ ವರೆಗೂ ಇದೆ.

ಇವುಗಳನ್ನು ಕನ್ನಡಿಯ ಗೂಡು ಮಾಡಿ, ಕನ್ನಡಿಯ ಒಳಗೆ ಇರುವ ಗಂಟಿನಂತೆ ರಕ್ಷಿಸಿಟ್ಟಿದ್ದಾರೆ. ಮರದ ಪ್ರತಿಯೊಂದು ಕನ್ನಡಿಯ ಗೂಡಿಗೂ ಸಂಖ್ಯೆಯನ್ನು ನೀಡಿದ್ದಾರೆ. ಈಗ ಕಾಡಿನೊಳಗೆ ಅಂತಹ ಭಾರಿ ಗಾತ್ರದ ಮರಗಳೇನೂ ಇಲ್ಲ. ಮರಳುಗಾಡಿನ ಕಾಡು ಇದು. ಆದರೂ ಈ ಭಾಗದ ಮಣ್ಣು ಮಾತ್ರ ಗಟ್ಟಿಯಾಗಿದೆ. ಸಣ್ಣ ಪುಟ್ಟ ಕಲ್ಲುಬಂಡೆಗಳೂ ಇವೆ.

'ಈ ಪ್ರದೇಶದಲ್ಲಿ ಬಹುಸಂಖ್ಯಾತರು ಮುಸ್ಲಿಮರು. ಹಿಂದೂಗಳ ಸಂಖ್ಯೆ ಶೇಕಡಾ 30ರಷ್ಟು ಮಾತ್ರ' ಎಂದು ನಮ್ಮ ಚಾಲಕ ಹರೀಶ್ ಮಾಹಿತಿ ನೀಡಿದ. ಅವನು ಯಾವ ಅರ್ಥದಲ್ಲಿ ಈ ಮಾತು ಹೇಳಿದ ಅನ್ನುವುದು ಗೊತ್ತಾಗಲಿಲ್ಲ. ಇಲ್ಲಿ ಎರಡೂ ಧರ್ಮದವರು ಅನ್ಯೋನ್ಯವಾಗಿದ್ದಾರೆ. ಮರುಭೂಮಿಯಲ್ಲಿ ನಡೆದ ಸಾಂಸ್ಕೃತಿಕ ಪ್ರದರ್ಶನದಲ್ಲಿ ಆ ಅನ್ಯೋನ್ಯತೆ ಎದ್ದು ಕಾಣುತ್ತಿತ್ತು. ಅನ್ಯೋನ್ಯತೆಯನ್ನು ನೋಡಿದಾಗ 'ಅಲ್ಪ–ಬಹುಸಂಖ್ಯಾತರ ಮಾತು ಬರೀ ರಾಜಕೀಯದ್ದು' ಎಂದು ಅನ್ನಿಸಿದ್ದು ಸುಳ್ಳಲ್ಲ.